All India Radio: Bangalore
National Bulletin In Kannada
07.02.2026 7.35 pm
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><><*><><<>

ಮುಖ್ಯಾಂಶಗಳು

೧. ಶರಣಾದ ಮಾವೋವಾದಿಗಳ ಪುನರ್ ವಸತಿಗೆ ಕೇಂದ್ರ ಸರ್ಕಾರ ಬದ್ಧ- ರಾಷ್ಟ್ರಪತಿ ದ್ರೌಪದಿ ಮುರ್ಮು

೨. ಪ್ರಧಾನಿ ನರೇಂದ್ರ ಮೋದಿ ಮಲೇಷಿಯಾ ಭೇಟಿ; ಉಭಯ ದೇಶಗಳ ಸಂಬಂಧ ಬಲವರ್ಧನೆಗೆ ಒತ್ತು

೩. ಕೇಂದ್ರ ಬಜೆಟ್; ಕರ್ನಾಟಕಕ್ಕೆ ಹೆಚ್ಚಿನ ಆದ್ಯತೆ, ಎಲೆಕ್ಟ್ರಾನಿಕ್ಸ್, ಐಟಿ, ರೈಲ್ವೆಗೆ ಹೆಚ್ಚಿನ ಅನುದಾನ- ಕೇಂದ್ರ ಸಚಿವ ಅಶ್ವಿನಿ ವೈಷ್ಣವ್

೪. ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್; ಮೂರನೇ ಪಂದ್ಯದಲ್ಲಿ ಭಾರತದ ವಿರುದ್ಧ ಟಾಸ್ ಗೆದ್ದ ಅಮೆರಿಕ, ಬೌಲಿಂಗ್ ಆಯ್ಕೆ

<><><*><><<>

ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ಛತ್ತೀಸ್‌ಗಢದ ಬಸ್ತಾರ್‌ನ ಜಗದಲ್‌ಪುರದಲ್ಲಿ ಬಸ್ತಾರ್ ಪಾಂಡುಂ ಹಬ್ಬವನ್ನು ಉದ್ಘಾಟಿಸಿದರು. ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಬಸ್ತಾರ್‌ನ ಜನರು ಜೀವನವನ್ನು ಹಬ್ಬದಂತೆ ಆಚರಿಸುತ್ತಾರೆ. ಬಸ್ತಾರ್ ಪಾಂಡುಂ ಹಬ್ಬದ ಮೂಲಕ ದೇಶಕ್ಕೂ ಜಗತ್ತಿಗೂ ಬಸ್ತಾರ್ ಪ್ರದೇಶದ ಶ್ರೀಮಂತ ಆದಿವಾಸಿ ಸಂಸ್ಕೃತಿಯ ಅನಾವರಣವಾಗುತ್ತದೆ ಎಂದು ಹೇಳಿದರು. ಕಳೆದ ನಾಲ್ಕು ದಶಕಗಳಿಂದ ಬಸ್ತಾರ್ ಪ್ರದೇಶವು ಮಾವೋವಾದ ಸಮಸ್ಯೆಯಿಂದ ಬಳಲುತ್ತಿದ್ದು, ಇದರಿಂದ ಆದಿವಾಸಿ ಸಮುದಾಯಗಳು, ಯುವಕರು ಮತ್ತು ಪರಿಶಿಷ್ಟ ಸಮುದಾಯ ಹೆಚ್ಚು ಸಂಕಷ್ಟ ಅನುಭವಿಸಿದ್ದಾರೆ. ಕೇಂದ್ರ ಸರ್ಕಾರವು ಮಾವೋವಾದಿ ಹಿಂಸಾಚಾರದ ವಿರುದ್ಧ ಕೈಗೊಂಡ ದೃಢ ಕ್ರಮಗಳಿಂದ ವರ್ಷಗಳ ಕಾಲ ಈ ಪ್ರದೇಶದಲ್ಲಿ ನೆಲೆಸಿದ್ದ ಭಯ, ಅಸುರಕ್ಷತೆ ಮತ್ತು ಅವಿಶ್ವಾಸದ ವಾತಾವರಣ ಅಂತ್ಯವಾಗುತ್ತಿದೆ ಎಂದರು.

ಮಾವೋವಾದದೊಂದಿಗೆ ಸಂಬಂಧ ಹೊಂದಿದ್ದ ಅನೇಕರು ಹಿಂಸೆಯ ಮಾರ್ಗವನ್ನು ತ್ಯಜಿಸಿ ಸಮಾಜದ ಮುಖ್ಯವಾಹಿನಿಗೆ ಮರಳುತ್ತಿದ್ದು, ಶರಣಾದ ಮಾವೋವಾದಿಗಳ ಪುನರ್ವಸತಿಗಾಗಿ ಸರ್ಕಾರವು ಹಲವು ಅಭಿವೃದ್ಧಿ ಮತ್ತು ಕಲ್ಯಾಣ ಯೋಜನೆಗಳನ್ನು ಜಾರಿಗೆ ತರುತ್ತಿದೆ ಎಂದು ತಿಳಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಛತ್ತೀಸ್‌ಗಢ ರಾಜ್ಯಪಾಲ ರಾಮನ್ ಡೇಕಾ, ಮುಖ್ಯಮಂತ್ರಿ ವಿಷ್ಣು ದೇವ್ ಸಾಯಿ ಮತ್ತು ಕೇಂದ್ರ ಸಚಿವ ಟೋಖನ್ ಸಾಹು ಉಪಸ್ಥಿತರಿದ್ದರು.

<>><><*><><<>

ಛತ್ತೀಸ್‌ಗಢದಲ್ಲಿ, ಬಸ್ತಾರ್ ವಿಭಾಗದ ಬಿಜಾಪುರ ಮತ್ತು ಸುಕ್ಮಾ ಜಿಲ್ಲೆಗಳಲ್ಲಿ ಇಂದು ಒಟ್ಟು ಐವತ್ತೊಂದು ಮಾವೋವಾದಿಗಳು ಭದ್ರತಾ ಪಡೆಗಳ ಮುಂದೆ ಶರಣಾದರು. ಈ ಮಾವೋವಾದಿಗಳಿಗೆ ಒಂದು ಕೋಟಿ ಅರವತ್ತೊಂದು ಲಕ್ಷ ರೂಪಾಯಿಗಳ ಬಹುಮಾನವನ್ನು ಘೋಷಿಸಲಾಗಿತ್ತು.

<>><><*><><<>

ಪ್ರಧಾನಿ ನರೇಂದ್ರ ಮೋದಿ ಅವರು ಎರಡು ದಿನಗಳ ಅಧಿಕೃತ ಭೇಟಿಗಾಗಿ ಇಂದು ಮಲೇಷ್ಯಾ ತಲುಪಿದ್ದಾರೆ. ಅಲ್ಲಿ ಪ್ರಧಾನಿಯವರನ್ನು ಭವ್ಯ ಸ್ವಾಗತದೊಂದಿಗೆ ಬರಮಾಡಿಕೊಳ್ಳಲಾಯಿತು. ಬಳಿಕ ಕೌಲಾಲಂಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತೀಯ ವಲಸಿಗರನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಭಾರತ ಮತ್ತು ಮಲೇಷ್ಯಾ ನಡುವಿನ ಆಳವಾದ ವೈಯಕ್ತಿಕ ಮತ್ತು ಜನರ ನಡುವಿನ ಸಂಬಂಧವನ್ನು ಒತ್ತಿ ಹೇಳಿದರು. ಭಾರತೀಯ ವಲಸಿಗರು, ಎರಡು ರಾಷ್ಟ್ರಗಳ ಹೃದಯಗಳನ್ನು ಸಂಪರ್ಕಿಸುವ ಜೀವಂತ ಸೇತುವೆ ಎಂದು ಬಣ್ಣಿಸಿದರು. ಮಲೇಷ್ಯಾದ ಪ್ರಧಾನಿ ಅನ್ವರ್ ಇಬ್ರಾಹಿಂ ಅವರೊಂದಿಗಿನ ತಮ್ಮ ದೀರ್ಘಕಾಲದ ಸ್ನೇಹವನ್ನು ನೆನಪಿಸಿಕೊಂಡ ಪ್ರಧಾನಿ, ಭಾರತ ಮತ್ತು ಮಲೇಷ್ಯಾ ೨೦೨೪ ರಲ್ಲಿ ತಮ್ಮ ಸಂಬಂಧವನ್ನು ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಗೆ ಏರಿಸಿದವು ಎಂದು ಹೇಳಿದರು. ಉಭಯ ದೇಶಗಳು ಪ್ರಸ್ತುತ ಪರಸ್ಪರರ ಯಶಸ್ಸನ್ನು ಆಚರಿಸುತ್ತಿವೆ. ೧೦೦ ಕ್ಕೂ ಹೆಚ್ಚು ಭಾರತೀಯ ಐಟಿ ಕಂಪನಿಗಳು ಮಲೇಷ್ಯಾದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸುತ್ತಿವೆ ಎಂದು ತಿಳಿಸಿದರು. ಭಾರತದ ಡಿಜಿಟಲ್ ಪಾವತಿ ವೇದಿಕೆ ಯುಪಿಐ ಅನ್ನು ಶೀಘ್ರದಲ್ಲೇ ಮಲೇಷ್ಯಾದಲ್ಲಿ ಪ್ರಾರಂಭಿಸಲಾಗುವುದು ಎಂದು ಪ್ರಧಾನಿ ಘೋಷಿಸಿದರು. ಭಾರತದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ತಿರುವಳ್ಳುವರ್ ವಿದ್ಯಾರ್ಥಿವೇತನವನ್ನು ಪರಿಚಯಿಸಲಾಗುವುದು ಮತ್ತು ಮಲೇಷ್ಯಾದಲ್ಲಿ ಹೊಸ ಭಾರತೀಯ ದೂತಾವಾಸವನ್ನು ತೆರೆಯಲಾಗುವುದು ಎಂದು ತಿಳಿಸಿದರು.

ಇದೇ ವೇಳೆ, ಸಮೃದ್ಧ ಮಲೇಷ್ಯಾ ಮತ್ತು ಅಭಿವೃದ್ಧಿ ಹೊಂದಿದ ಭಾರತದ ದೃಷ್ಟಿಕೋನಕ್ಕೆ ಕೊಡುಗೆ ನೀಡಿದ್ದಕ್ಕಾಗಿ ವಲಸಿಗರನ್ನು ಪ್ರಧಾನಿ ಶ್ಲಾಘಿಸಿದರು. ಈ ಭೇಟಿಯ ಸಮಯದಲ್ಲಿ, ಎರಡೂ ಕಡೆಯವರು ದ್ವಿಪಕ್ಷೀಯ ಸಂಬಂಧಗಳ ಸಂಪೂರ್ಣ ವ್ಯಾಪ್ತಿಯನ್ನು ಪರಿಶೀಲಿಸಲಿದ್ದಾರೆ. ಮಲೇಷ್ಯಾ ತನ್ನ ಆಕ್ಟ್ ಈಸ್ಟ್ ನೀತಿಯಡಿಯಲ್ಲಿ ಭಾರತಕ್ಕೆ ಪ್ರಮುಖ ಪಾಲುದಾರರಾಗಿದ್ದು, ಈ ಭೇಟಿಗೆ ಹೆಚ್ಚುವರಿ ಕಾರ್ಯತಂತ್ರದ ಮಹತ್ವವನ್ನು ನೀಡಿದೆ.

<>><><*><><<>

೨೦೨೬ರ ಕೇಂದ್ರ ಬಜೆಟ್‌ನಲ್ಲಿ ಎಲೆಕ್ಟ್ರಾನಿಕ್ಸ್ ಉತ್ಪಾದನೆ ಮತ್ತು ಐ-ಟಿ ವಲಯಕ್ಕೆ ಬಹುದೊಡ್ಡ ಬೆಂಬಲ ನೀಡಲಾಗಿದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಹಾಗೂ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿಂದು ಕೇಂದ್ರ ಬಜೆಟ್ ಕುರಿತಂತೆ ಮಾತನಾಡಿದ ಅವರು, ಈ ಬಾರಿಯ ಬಜೆಟ್ ನಲ್ಲಿ ಹಲವು ಸುಧಾರಣೆಗಳನ್ನು ಘೋಷಿಸಲಾಗಿದ್ದು, ಉತ್ಪಾದನಾ ಕ್ಷೇತ್ರಕ್ಕೆ ಒತ್ತು ನೀಡಿಲಾಗಿದೆ. ಕಳೆದ ೧೦ ವರ್ಷಗಳಲ್ಲಿ ಎಲೆಕ್ಟ್ರಾನಿಕ್ಸ್ ಉತ್ಪಾದನೆಯಲ್ಲಿ ಆರು ಪಟ್ಟು ಹೆಚ್ಚಾಗಿದ್ದು, ರಫ್ತಿನ ಪ್ರಮಾಣದಲ್ಲಿ ೮ ಪಟ್ಟು ಏರಿಕೆಯಾಗಿದೆ.  ಈ ಮೂಲಕ ಭಾರತ ಜಾಗತಿಕವಾಗಿ ಉತ್ಪಾದನೆ ಮತ್ತು ರಫ್ತಿವಿನಲ್ಲಿ ಮೂರನೇ ಸ್ಥಾನಕ್ಕೇರಿದೆ. ಎಲೆಕ್ಟ್ರಾನಿಕ್ಸ್ ಕಾಂಪೋನೆಂಟ್ ಮ್ಯಾನುಫ್ಯಾಕ್ಚರಿಂಗ್‌ನಲ್ಲಿ ಕರ್ನಾಟಕಕ್ಕೆ ೧೦ ಸಾವಿರ ಕೋಟಿ ರೂಪಾಯಿ ಹೂಡಿಕೆಯಾಗಿದೆ ಎಂದು ತಿಳಿಸಿದರು. ಬೆಂಗಳೂರು ಐಟಿ, ಸ್ಟಾರ್ಟ್‌ಅಪ್, ಎಲೆಕ್ಟ್ರಾನಿಕ್ಸ್ ಮತ್ತು ನಾವೀನ್ಯತೆಯ ಪ್ರಮುಖ ಕೇಂದ್ರವಾಗಿದ್ದು, ಕರ್ನಾಟಕಕ್ಕೆ ಈ ಬಜೆಟ್‌ನಿಂದ ಬಹಳ ಪ್ರಯೋಜನವಾಗಲಿದೆ ಎಂದು ತಿಳಿಸಿದರು. ಐಟಿ ವಲಯಕ್ಕೆ ಸ್ಥಿರ, ಸರಳ ಮತ್ತು ಬೆಳವಣಿಗೆಗೆ ಅನುಕೂಲಕರ ತೆರಿಗೆ ವ್ಯವಸ್ಥೆಯನ್ನು ರೂಪಿಸಲಾಗಿದೆ. ಇಂತಹ ವಿಶ್ವಾಸಾರ್ಹತೆಯಿಂದ ದೊಡ್ಡಮಟ್ಟದ ಐಟಿ ವಲಯಗಳು ಭಾರತದತ್ತ ಮುಖಮಾಡುತ್ತಿವೆ ಎಂದು ಹೇಳಿದರು. ಬಹುಮುಖ್ಯವಾಗಿ ಬಜೆಟ್‌ನಲ್ಲಿ ಕಟ್ಟಡ ನಿರ್ಮಾಣ ಘಟಕ, ರಕ್ಷಣಾ ಉತ್ಪನ್ನಗಳ ಅಭಿವೃದ್ಧಿ, ಜವಳಿ ಉದ್ಯಮ, ಅಪರೂಪ ಖನಿಜ, ಕ್ರೀಡಾ ಸಾಮಾಗ್ರಿಗಳು, ರಾಸಾಯನಿಕ ಪಾರ್ಕ್ ಸೇರಿದಂತೆ ಹಲವು ಕ್ಷೇತ್ರಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಡಾಟಾ ಸೆಂಟರ್‌ನಲ್ಲಿ ಕೃತಕಬುದ್ಧಿಮತ್ತೆ ಒಳಗೊಂಡ ಸೇವೆ ಒದಗಿಸಲಾಗುವುದು. ಹೊಸ ಸೆಮಿಕಂಡಕ್ಟರ್ ಮಿಷನ್ ೨.೦ ಅನ್ನು ಪ್ರಾರಂಭಿಸಲಾಗಿದ್ದು, ಇದು ಭಾರತದಲ್ಲಿ ಚಿಪ್ ವಿನ್ಯಾಸ, ಉತ್ಪಾದನೆ, ಪೂರ್ಣ ಪೂರೈಕೆ ಬಲಪಡಿಸಲು ಸಹಾಯ ಮಾಡುತ್ತದೆ ಎಂದರು. ಇಂತಹ ಹಲವು ಯೋಜನೆಗಳಿಂದ ಪ್ರಧಾನಮಂತ್ರಿಯವರ ಜನ್ ಧನ್ ಯೋಜನೆಯ ಆಶಯದಂತೆ ಮತ್ತಷ್ಟು ಜನಜೀವನದ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು. ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕವು ರೈಲ್ವೆ ಯೋಜನೆಗಳಿಗೆ ೭೭೪೮ ಕೋಟಿ ರೂಪಾಯಿಗಳನ್ನು ಪಡೆದಿದೆ.

ಶೀಘ್ರವೇ ಮಂಗಳೂರು - ಬೆಂಗಳೂರು ನಡುವೆ ವಂದೇ ಭಾರತ ರೈಲು ಸಂಚಾರ ಆರಂಭವಾಗಲಿದೆ. ರೈಲು ಮಾರ್ಗದ ಘಾಟ್ ವಿಭಾಗವು ವಿದ್ಯುದ್ದೀಕರಣಗೊಂಂಡಿದ್ದು, ಸುರಕ್ಷತಾ ಪರೀಕ್ಷೆಗಳು ಮತ್ತು ಪ್ರಮಾಣೀಕರಣದ ನಂತರ, ಎರಡು ನಗರಗಳ ನಡುವೆ ರೈಲುಗಳನ್ನು ಓಡಿಸುವ ವೇಳಾಪಟ್ಟಿಯನ್ನು ಶೀಘ್ರದಲ್ಲೇ ಘೋಷಿಸಲಾಗುವುದು ಎಂದು ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದರು.

<>><><*><><<>

೨೦೪೭ ರ ವಿಕಸಿತ ಭಾರತ ಗುರಿಯನ್ನು ಸಾಧಿಸಲು ಪ್ರತಿಯೊಬ್ಬ ನಾಗರಿಕರ ಭಾಗವಹಿಸುವಿಕೆ ಹಾಗೂ ಸರ್ಕಾರ ಮತ್ತು ಜನರ ನಡುವೆ ಬಲವಾದ ಪಾಲುದಾರಿಕೆ ಅಗತ್ಯ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ, ಭೂ ವಿಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ. ವಿಜಯವಾಡದಲ್ಲಿ ಆಂಧ್ರಪ್ರದೇಶ ಬಿಜೆಪಿ ಘಟಕ ಆಯೋಜಿಸಿದ್ದ ೨೦೨೬-೨೭ ರ ವಿಕಸಿತ ಭಾರತ ಬಜೆಟ್ ಕುರಿತ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಗತಿಕ ಬೆಂಬಲವನ್ನು ಬಯಸುತ್ತಿದ್ದ ಭಾರತ ಇಂದು ಜಗತ್ತು ತಿರುಗಿ ನೋಡುವ ಮಟ್ಟಕ್ಕೆ ಬೆಳೆದಿದೆ ಎಂದರು. ಭಾರತವು ೨೦೪೦ ರ ವೇಳೆಗೆ ಭಾರತೀಯ ಗಗನಯಾತ್ರಿಯನ್ನು ಚಂದ್ರನಿಗೆ ಕಳುಹಿಸುವ ಗುರಿಯನ್ನು ಹೊಂದಿದೆ. ಇದು ರಾಷ್ಟ್ರೀಯ ಹೆಮ್ಮೆ ಮತ್ತು ವೈಜ್ಞಾನಿಕ ಬಲಕ್ಕೆ ಒಂದು ಮೈಲಿಗಲ್ಲು ಎಂದು ಹೇಳಿದರು.

<>><><*><><<>

ಭಾರತ-ಅಮೆರಿಕಾ ಮಧ್ಯಂತರ ವ್ಯಾಪಾರ ಒಪ್ಪಂದದ ಅಡಿಯಲ್ಲಿ ಭಾರತೀಯ ರಫ್ತುಗಳ ಮೇಲೆ ವಿಧಿಸಲಾಗುತ್ತಿದ್ದ ಶೇಕಡಾ ೫೦ ರಷ್ಟಿದ್ದ ಪರಸ್ಪರ ಶುಲ್ಕವನ್ನು ಈಗ ಶೇಕಡಾ ೧೮ ಕ್ಕೆ ಇಳಿಸಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ನವದೆಹಲಿಯಲ್ಲಿಂದು ಮಾಧ್ಯಮಗಳಿಗೆ ಮಾಹಿತಿ ನೀಡಿದ ಸಚಿವರು, ಚೀನಾ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ವಿಯೆಟ್ನಾಂ ಸೇರಿದಂತೆ ಭಾರತದ ನೆರೆ ರಾಷ್ಟ್ರಗಳಿಗಿಂತ ಭಾರತದಲ್ಲಿ ಕಡಿಮೆ ಶುಲ್ಕವಿದೆ. ಈ ಒಪ್ಪಂದವು ದೇಶದ ಕೃಷಿ ಮತ್ತು ಹಾಲು ಉತ್ಪಾದನಾ ಕ್ಷೇತ್ರವನ್ನು ರಕ್ಷಿಸುತ್ತದೆ ಎಂದು ಸ್ಪಷ್ಟಪಡಿಸಿದರು. ಜೊತೆಗೆ ಮಸಾಲೆ ಪದಾರ್ಥಗಳು, ಚಹಾ, ಕಾಫಿ, ಗೋಡಂಬಿ, ಚೆಸ್ಟ್‌ನಟ್, ಅವಕಾಡೋ, ಬಾಳೆಹಣ್ಣು, ಮಾವು, ಕಿವಿ ಮತ್ತು ಪಪ್ಪಾಯಿ ಸೇರಿದಂತೆ ಕೃಷಿ ಉತ್ಪನ್ನಗಳಿಗೆ ಅಮೆರಿಕಾದಲ್ಲಿ ಶೂನ್ಯ ಶುಲ್ಕ ವಿಧಿಸಲಾಗುವುದು. ಜೊತೆಗೆ ಈ ವ್ಯಾಪಾರ ಒಪ್ಪಂದವನ್ನು ದೇಶದ ಎಲ್ಲ ವಲಯಗಳಿಂದ ಸ್ವಾಗತಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

<>><><*><><<>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 'ಸಹಕಾರದ ಮೂಲಕ ಸಮೃದ್ಧಿ' ಎಂಬ ದೃಷ್ಟಿಕೋನವನ್ನು ಸಾಕಾರಗೊಳಿಸಲು ವಿದ್ಯಾರ್ಥಿಗಳು ಸಹಕಾರ ಕ್ಷೇತ್ರದಲ್ಲಿ ವೃತ್ತಿಪರವಾಗಿ ಕಾರ್ಯನಿರ್ವಹಿಸಬೇಕು ಎಂದು ಕೇಂದ್ರ ಸಹಕಾರ ಹಾಗೂ ನಾಗರಿಕ ವಿಮಾನಯಾನ ಸಹಾಯಕ ಸಚಿವ ಮುರಳೀಧರ್ ಮೋಹೋಳ್ ಕರೆ ನೀಡಿದ್ದಾರೆ. ಪುಣೆಯಲ್ಲಿರುವ ವೈಕುಂಠ್ ಮೆಹ್ತಾ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ನಲ್ಲಿ ನಡೆದ ಪಿಜಿಡಿಎಂ ಎಬಿಎಂ ೨೦೨೩-೨೫ ಬ್ಯಾಚ್‌ನ ೩೧ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಸಹಕಾರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಕೇವಲ ಅನುಭವದ ಮೇಲೆ ಅವಲಂಬಿಸದೇ, ವೃತ್ತಿಪರ ನಿರ್ವಹಣಾ ವಿಧಾನಗಳು ಮತ್ತು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ.

<>><><*><><<>

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್‌ನ ಮೂರನೇ ಪಂದ್ಯದಲ್ಲಿ ಭಾರತ ಹಾಗೂ ಅಮೆರಿಕ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಅಮೆರಿಕ ಬೌಲಿಂಗ್ ಆಯ್ಕೆ ಮಾಡಿಕೊಂಡಿದೆ. ಮೊದಲು ಬ್ಯಾಟಿಂಗ್ ಮಾಡುತ್ತಿರುವ ಭಾರತ ಇತ್ತೀಚಿನ ವರದಿಯಂತೆ ೪ ಓವರ್‌ಗಳಲ್ಲಿ ೧ ವಿಕೆಟ್ ನಷ್ಟಕ್ಕೆ ೩೩ ರನ್ ಮಾಡಿ ಆಡುತ್ತಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ ><><<>